# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6120\2014\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30/12/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ರಂಗಯ್ಯ ಬಿನ್ ಲೇ.ಹೊನ್ನಯ್ಯ, ಹೊಸೂರು ಗೇಟ್, ಬಲ್ಲೇನಹಳ್ಳಿ ಅಂಚೆ, ಹುಣಸೂರು ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ಬಲ್ಲೇನಹಳ್ಳಿ ಅಂಚೆ ಹೊಸೂರು ಗೇಟ್ ನಿವಾಸಿಯಾದ ಶ್ರೀ.ರಂಗಯ್ಯ ಬಿನ್ ಲೇ.ಹೊನ್ನಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ತಹಶೀಲ್ದಾರ್ ಶ್ರೀ.ವೆಂಕಟಾಚಲಪ್ಪ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಹುಣಸೂರು ತಾಲ್ಲೂಕ್ ಹನಗೋಡು ಹೋಬಳಿ ವಾರಂಚಿ ಗ್ರಾಮದ ಸರ್ವೆ ನಂ.4 ಮತ್ತು 5ರಲ್ಲಿ ತಮ್ಮ ಹೆಸರಿಗೆ ಮಂಜೂರಾದ ಸ್ವತ್ತುಗಳನ್ನು ಸರ್ವೆ ಮಾಡಿ, ಅಳತೆ ಮಾಡಿಕೊಡಲು ಮನವಿ ಮಾಡಿದರೂ ವಿಳಂಬ ಮಾಡಿದ್ದಾರೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ವರದಿ/ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ವರದಿಯಲ್ಲಿ-

ಸರ್ಕಾರದ ಸುತ್ತೋಲೆಯಂತೆ ದರಖಾಸ್ತು ಪೋಡಿ ಕಡತಗಳನ್ನು ಪರಿಶೀಲಿಸಿ ನಮೂನೆ-1 ರಿಂದ 5ನ್ನು ತಯಾರಿಸಿ, ನಮೂನೆ-6 ರಿಂದ 10ನ್ನು ತಯಾರಿಸಿ ಅಳತೆ ಕಾರ್ಯ ಕೈಗೊಳ್ಳಲು ಭೂ

Sd/-

ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕಾಗಿದೆ. ಅದರಂತೆ ಈ ಪ್ರಕರಣದಲ್ಲಿ ನಮೂನೆ-1 ರಿಂದ 5ನ್ನು ತಯಾರಿಸಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸಲ್ಲಿಸಲಾಗಿರುವುದಾಗಿ ಹೇಳಿದ್ದಾರೆ. ನಮೂನೆ-6 ರಿಂದ 10ನ್ನು ತಯಾರಿಸಿ, ಅಳತೆ ಕಾರ್ಯವನ್ನು ಪೂರೈಸುವ ಕಾರ್ಯವು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ವ್ಯಾಪ್ತಿಗೆ ಒಳಪಟ್ಟಿರುವುದಾಗಿ ಹೇಳಿದ್ದಾರೆ.

4. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಹುಣಸೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ಸದರಿಯವರು ತಮ್ಮ ತನಿಖಾ ವರದಿಯಲ್ಲಿ –

ಎದುರುದಾರರು ನಮೂನೆ-6 ರಿಂದ 10ನ್ನು ತಯಾರಿಸಿದ ಬಗ್ಗೆ ವರದಿಯನ್ನು ಸಲ್ಲಿಸಿಲ್ಲ. ಪತ್ರ ದಿನಾಂಕ:07/11/2017ರಲ್ಲಿ ಎದುರುದಾರರು, ಸರ್ವೆ ನಂ.4 ಮತ್ತು 5ರಲ್ಲಿನ ಮಂಜೂರಿ ವಿಸ್ತೀರ್ಣಕ್ಕೂ ಮತ್ತು ಅನುಭವದ ವಿಸ್ತೀರ್ಣಕ್ಕೂ ಹೆಚ್ಚು ಕಡಿಮೆಯಿದ್ದು, ಅಳತೆಯಂತೆ ದುರಸ್ತಿ ಕ್ರಮ ಕೈಗೊಳ್ಳಲು ನಮೂನೆ-6ರ ಹೆಚ್ಚು ಕಡಿಮೆ ಪಟ್ಟಿಯಂತೆ ಮೂಲ ಮಂಜೂರಿ ಕಡತದಲ್ಲಿ ಸಾಗುವಳಿ ಚೀಟಿ ಮತ್ತು ಅಧಿಕೃತ ಜ್ಞಾಪನವನ್ನು ತಿದ್ದುಪಡಿ ಮಾಡಿ, ಪೋಡಿ ನಕ್ಷೆಯನ್ನು ಅನುಮೋದಿಸಿ, ನಮೂನೆ-7 ಮತ್ತು 8ನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ. ಅದರಂತೆ ಪೋಡಿ ನಕ್ಷೆ, ನಮೂನೆ-7 ಮತ್ತು 8ನ್ನು ಪರಿಶೀಲಿಸಿ ಸ್ಪಷ್ಟ ವರದಿಯನ್ನು ಕೋರಲಾಗಿದ್ದು, ಮೂಲ ಮಂಜೂರಿದಾರರು ಅನುಭವದ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲು ಮಂಜೂರಿದಾರರು ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ. ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಅನುಭವದ ವಿಸ್ತೀರ್ಣವನ್ನು ತಿದ್ದುಪಡಿ ಮಾಡುವ ಬಗ್ಗೆ ಕ್ರಮ ವಹಿಸಲಾಗುತ್ತದೆಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ವಾರಂಚಿ ಗ್ರಾಮದ ಸರ್ವೆ ನಂ.4 ಮತ್ತು 5ರಲ್ಲಿ ದೂರುದಾರರ ತಂದೆ ಲೇ.ಹೊನ್ನಯ್ಯ ರವರಿಗೆ ಜಮೀನು ಮಂಜೂರಾದ ಬಗ್ಗೆ ಯಾವುದೇ ತಕರಾರು ಇಲ್ಲ. ವಾರಂಚಿ ಗ್ರಾಮದ ಸರ್ವೆ ನಂ.4/42ಬಿ ಮತ್ತು 5/23ಪಿ ರಲ್ಲಿ ಕ್ರಮವಾಗಿ, 2 ಎಕರೆ 31 ಗುಂಟೆ ಮತ್ತು 3 ಎಕರೆ ಜಮೀನುಗಳು ಶ್ರೀಮತಿ.ಗೌರಮ್ಮ ಕೋಂ ಲೇ.ಹೊನ್ನಯ್ಯ ರವರ ಹೆಸರಿಗೆ ದಾಖಲಾಗಿರುವುದು 2013-14ನೇ ಸಾಲಿನಲ್ಲಿನ ಆರ್‌ಟಿಸಿ ಗಳಲ್ಲಿ ಕಂಡು ಬಂದಿದೆ. ಸದರಿ ಸರ್ವೆ ನಂಬರುಗಳಲ್ಲಿ ಒಟ್ಟು 46 ಮಂಜೂರಿದಾರರಿದ್ದು, ಅಳತೆ ಮಾಡಲು ಭೂ ಮಾಪಕರು ಹಾಜರಾದಾಗ ಜಮೀನಿನಲ್ಲಿ ಬೆಳೆ ಇರುವುದರಿಂದ, ಬೆಳೆ ಕಟಾವಾದ ನಂತರ ಅಳತೆ ಕೆಲಸ ಪೂರೈಸಿಕೊಡಬೇಕೆಂದು ಗ್ರಾಮಸ್ಥರು ಭೂ ಮಾಪಕರಿಗೆ ಮನವಿ ಮಾಡಿಕೊಂಡಿದ್ದಾರೆಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ದಿನಾಂಕ:22/12/16ರ ಪತ್ರದಲ್ಲಿ ಹೇಳಿದೆ. ನಮೂನೆ-6 ರಿಂದ 10ರ ಮಂಜೂರಿ ವಿಸ್ತೀರ್ಣಕ್ಕೂ ಮತ್ತು ಅನುಭವದ ವಿಸ್ತೀರ್ಣಕ್ಕೂ ಹೆಚ್ಚು ಕಡಿಮೆ ಇದ್ದಲ್ಲಿ, ಅನುಭವದ ವಿಸ್ತೀರ್ಣಕ್ಕೆ ತಾಳೇ ಇಟ್ಟು

ದುರಸ್ತಿಪಡಿಸಲು ಯಾವುದೇ ತಕರಾರು ಇಲ್ಲ ಹಾಗೂ ಈ ಸಂಬಂಧ ಸರ್ಕಾರದಿಂದ ಪರಿಹಾರವನ್ನು ಕೋರುವುದಿಲ್ಲವೆಂದು ಛಾಪಾ ಕಾಗದದಲ್ಲಿ ಹೇಳಿಕೆ/ ಪ್ರಮಾಣ ಪತ್ರ ವನ್ನು ಸಲ್ಲಿಸಿದ್ದಲ್ಲಿ, ಅನುಭವದ ವಿಸ್ತೀರ್ಣವನ್ನು ತಿದ್ದುಪಡಿ ಮಾಡುವ ಬಗ್ಗೆ ಕ್ರಮ ವಹಿಸಲಾಗುತ್ತದೆಂದು ಹೇಳಿದ್ದಾರೆ.

6. ಆದ್ದರಿಂದ, ಸದರಿ ಅನುಭವದ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲು ಕಾನೂನಿನ ಪ್ರಕಾರ (ಅನುಭವದ ವಿಸ್ತೀರ್ಣಕ್ಕೆ ತಾಳೇ ಇಟ್ಟು ದುರಸ್ತಿಪಡಿಸಲು ಯಾವುದೇ ತಕರಾರು ಇಲ್ಲ ಹಾಗೂ ಈ ಸಂಬಂಧ ಸರ್ಕಾರದಿಂದ ಪರಿಹಾರವನ್ನು ಕೋರುವುದಿಲ್ಲವೆಂದು ಛಾಪಾ ಕಾಗದದಲ್ಲಿ ಹೇಳಿಕೆ/ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಲ್ಲಿ) ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 30/12/17.

**(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**